1095 ಶ್ರೀಮತಿ ಅನಿತಾ ಕುಮಾರಸ್ವಾಮಿ (ಮಧುಗಿರಿ) : ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಜನಾಂಗದವರಿಗೆ ಯಾವ ಯಾವ ಯೋಜನೆಗಳಲ್ಲಿ ಮನೆಗಳನ್ನು ಹಂಚಿಕೆ ಮಾಡಲಾಗಿದೆ. (ವಿವರಗಳನ್ನು ನೀಡುವುದು);

ಶ್ರೀ ವಿ.ಸೋಮಣ್ಣ (ವಸತಿ ಹಾಗೂ ಮುಜರಾಯಿ ಸಚಿವರು) :

ಅ) ರಾಜ್ಯದಲ್ಲಿ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಜನಾಂಗದವರಿಗಾಗಿ ಈ ಕೆಳಕಂಡ ಯೋಜನೆಗಳಲ್ಲಿ ಮನೆಗಳನ್ನು ಹಂಚಿಕೆ ಮಾಡಲಾಗಿದೆ.

1. ಗ್ರಾಮೀಣ ಆಶ್ರಯ ಯೋಜನೆ
2. ಗ್ರಾಮೀಣ ಅಂಬೇಡ್ಕರ್ ಯೋಜನೆ
3. ನಗರ ಆಶ್ರಯ ಯೋಜನೆ
4. ನಗರ ಅಂಬೇಡ್ಕರ್ ಯೋಜನೆ
5. ಇಂದಿರಾ ಆವಾಸ್ ಯೋಜನೆ
6. ಪಿ.ಎಂ.ಜಿ.ವೈ ಯೋಜನೆ

ಈ ಮೇಲ್ಕಂಡ ಯೋಜನೆಗಳಡಿ ನಿಗಮವು ಪ್ರಾರಂಭವಾದಾಗಿನಿಂದ 2000-01 ರಿಂದ ಇಂದಿನವರೆಗೆ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ 1689346 ಮನೆಗಳನ್ನು ಹಂಚಿಕೆ ಮಾಡಲಾಗಿದ್ದು, ಹಂಚಿಕೆ ಮಾಡಲಾಗಿರುವ ಮನೆಗಳ ವಿವರಗಳನ್ನು ಈ ಕಳಕಂಡಂತೆ ನೀಡಲಾಗಿದೆ.

ಕ್ರ ಸಂ.	ಯೋಜನೆಗಳು	ನಿರ್ಮಿಸಲಾದ ಮನೆಗಳು			
		ಪ.ಜಾತಿ	ಪ.ಪಂಗಡ	ಸಾಮಾನ್ಯ	ಒಟ್ಟು
1	ಗ್ರಾಮೀಣ ಆಶ್ರಯ ಯೋಜನೆ	375468	96801	673944	1146212
2	ಗ್ರಾಮೀಣ ಅಂಬೇಡ್ಕರ್ ಯೋಜನೆ	95715	32461	0	128176
3	ನಗರ ಆಶ್ರಯ ಯೋಜನೆ	32153	7194	92055	131402

4	ನಗರ ಅಂಬೇಡ್ಕರ್ ಯೋಜನೆ	7785	1771	0	9556
5	ಇಂದಿರಾ ಆವಾಸ್ ಯೋಜನೆ	111634	51958	102879	266471
6	ಪಿ.ಎಂ.ಜಿ.ವೈ ಯೋಜನೆ	3960	2176	1393	7529
	ಒಟ್ಟು	**626715**	**192361**	**870271**	**1689346**

1095 Smt. Anitha Kumaraswamy (Madhugiri) : Hon'ble Minister for Housing & Muzrai kindly answer to the below question?

a) Under which housing schemes houses are sanctioned to the backward class people in the State; (Provide details)

Sri V.Somanna : (Minister for Housing Muzrai) :

a) The economically and socially backward class people of the State are sanctioned houses under following housing schemes;

1. Rural Ashraya Scheme
2. Rural Ambedkar Scheme
3. Urban Ashraya Scheme
4. Urban Ambedkar Scheme
5. Indira Awas Yojana
6. PMGY Scheme

The Corporation, since its inception i.e., from 2000-01 to till date has distributed 1689346 houses under the above mentioned Scheme. The details are as follows:

Sl. No.	Schemes	Constructed houses			
		SC	ST	General	Total
1	Rural Ashraya Scheme	375468	96801	673944	1146212
2	Rural Ambedkar Scheme	95715	32461	0	128176
3	Urban Ashraya Scheme	32153	7194	92055	131402

4	Urban Ambedkar Scheme	7785	1771	0	9556
5	Indira Awas Yojana	111634	51958	102879	266471
6	PMGY Scheme	3960	2176	1393	7529
Total		**626715**	**192361**	**870271**	**1689346**

654 ಶ್ರೀ ಪಾಟೀಲ್ ಎ.ಎಸ್.(ನಡಹಳ್ಳಿ) (ದೇವರ ಹಿಪ್ಪರಗಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ದೈಹಿಕ ಶಿಕ್ಷಕರ ಬಗ್ಗೆ ಪ್ರೊ: ಎಲ್.ಆರ್.ವೈದ್ಯನಾಥನ್ ಸಮಿತಿಯು ಸರ್ಕಾರಕ್ಕೆ ಯಾವಾಗ ವರದಿ ಸಲ್ಲಿಸಿದೆ; (ವರದಿಯ ವಿವರ ಒದಗಿಸುವುದು);

ಆ) ಈ ವರದಿ ಕಾರ್ಯರೂಪಕ್ಕೆ ಬಂದಿದೆಯೇ ಹಾಗೂ ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದ ಪಠ್ಯಪುಸ್ತಕವನ್ನು ಸರ್ಕಾರ ಸಿದ್ದಪಡಿಸಿದೆಯೇ; ಸಿದ್ದಪಡಿಸಿದ್ದಲ್ಲಿ, ಯಾವಾಗ ಪುಸ್ತಕವನ್ನು ಬಿಡುಗಡೆ ಮಾಡಲಾಗುವುದು;

ಇ) 10ನೇ ತರಗತಿಯವರೆಗೆ ಕಡ್ಡಾಯವಾಗಿ ದೈಹಿಕ ಶಿಕ್ಷಣ ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ; ಕೈಗೊಂಡಿದ್ದಲ್ಲಿ, ದೈಹಿಕ ಶಿಕ್ಷಕರ ನೇಮಕಾತಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಈ) ರಾಜ್ಯದಲ್ಲಿ ಎಷ್ಟು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿವೆ; ಈ ಎಲ್ಲಾ ಶಾಲೆಗಳಲ್ಲಿ ಆಟದ ಮೈದಾನಗಳಿವೆಯೇ; ಇಲ್ಲದಿದ್ದಲ್ಲಿ, ಆಟದ ಮೈದಾನದ ನಿರ್ಮಾಣಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಉ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ ಹಾಗೂ ಪ್ರಸ್ತುತ ಎಷ್ಟು ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದಾರೆ; ಇನ್ನುಳಿದ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರ ನೇಮಕಾತಿಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಪ್ರೊ: ಎಲ್.ಆರ್.ವೈದ್ಯನಾಥನ್ ಸಮಿತಿಯು ದಿ:11-12-2006 ರಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ವರದಿಯ ಸಂಕ್ಷಿಪ್ತ ವಿವರ ಕೆಳಕಂಡಂತಿದೆ.